

بِسْمِ اللهِ الرَّحْمَنِ الرَّحِيم

# ಸಜ್ಜನರ ಸಹವಾಸ ಮಾಡಿರಿ. ದುಷ್ಟ ಕೂಟಗಳಿಂದ ದೂರವಿರಿ.

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ 22–09–2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಲೋಕದಲ್ಲಿ ಅನೇಕ ತರದ ಕೂಟಗಳೂ ಸಭೆಗಳೂ ಇವೆ. ಈ ಎಲ್ಲಾ ಸಭೆಗಳಲ್ಲಿ ಮತ್ತು ಸಮಿತಿಗಳಲ್ಲಿ ಜನರು ಒಟ್ಟಿಗೆ ಸೇರಿ ಕುಳಿತುಕೊಳ್ಳುವುದು ಲೌಕಿಕ ಕೆಲಸಗಳಿಗೋಸ್ಕರವಾಗಿರುತ್ತದೆ. ಅಲ್ಲಾಹನಿಗೋಸ್ಕರ, ಅಲ್ಲಾಹನ ಸಂತೃಪ್ತಿ ಪಡೆಯಲಿಕ್ಕೋಸ್ಕರ ಅಥವಾ ಅಲ್ಲಾಹನ ಸಾಮೀಪ್ಯಗಳಿಸಲಿಕ್ಕೋಸ್ಕರ ಜನರು ಸಭೆ ಸೇರುವುದಿಲ್ಲ. ಜನರ ಹಿತಕ್ಕೋಸ್ಕರ ಯಾವುದಾದರೂ ಸಭೆ ಸೇರುವಾಗಲೂ ಯಾವುದಾದರೂ ವಿಷಯದ ಬಗ್ಗೆ ಯೋಚಿಸುವುದಾದರೆ ಅದು ಲೌಕಿಕ ಉದ್ದೇಶಲಕ್ಷ್ಯ ಗಳಿಗೋಸ್ಕರವಾಗಿರುತ್ತದೆ. ಅಲ್ಲಾಹನ ಸಂಪ್ರೀತಿ ಗಳಿಸುವುದು ಆ ಸಭೆಗಳ ಉದ್ದೇಶ ಲಕ್ಷ್ಯವಾಗಿರುವುದಿಲ್ಲ. ಆದರೆ ಕೆಲವು ಸಭೆಗಳು ಧಾರ್ಮಿಕ ಉದ್ದೇಶ ಲಕ್ಷ್ಯಗಳಿಗೋಸ್ಕರವಾಗಿರುತ್ತವೆ. ಮನುಷ್ಯರನ್ನು ಅಲ್ಲಾಹನಿಗೆ ಸಮೀಪಗೊಳ್ಳುವಂತೆ ಮಾಡುವ ಯೋಜನೆಗಳ ಬಗ್ಗೆ ಅಲ್ಲಿ ಯೋಚಿಸಲಾಗುತ್ತದೆ. ಆ ಸಭೆಗಳಿಗೆ ಬಂದು ಸೇರುವವರು ಅಲ್ಲಾಹನ ಸಂಪ್ರೀತಿಗಳಿಸಲು ಅದರಲ್ಲಿ ಭಾಗವಹಿಸುತ್ತಾರೆ. ಇಂತಹ ಸಭೆಗಳು ಅಲ್ಲಾಹನಿಗೆ ಇಷ್ಟಕರವಾಗಿವೆ. ಇಂತಹ ಸಭೆಗಳ ಪರಿಣಾಮಗಳು ಈ ಲೋಕದಲ್ಲಿಯೇ ಪ್ರಕಟವಾಗುತ್ತವೆ. ಇಂತಹ ಸಭೆಗಳಲ್ಲಿ ಭಾಗವಹಿಸುವವರಿಗೆ ಅಲ್ಲಾಹನು ಪರಲೋಕದಲ್ಲಿಯೂ ಅನುಗ್ರಹ ನೀಡುತ್ತಾನೆ. ಒಬ್ಬ ಸತ್ಯ ವಿಶ್ವಾಸಿ ಮಾಡಬೇಕಾದುದೇನೆಂದರೆ ಮನೆಯಲ್ಲಿ ಸಭೆ ಸೇರಿದರೂ ಅಥವಾ ಮನೆಯ ಹೊರಗೆ ಸಭೆ ಸೇರಿದರೂ ಅವನು ಮಾಡಬೇಕಾದ ಪ್ರಯತ್ನವೇನೆಂದರೆ ಅಲ್ಲಾಹನ ಸಂಪ್ರೀತಿ ಗಳಿಸುವುದು ಹೇಗೆ ಮತ್ತು ತನ್ನ ಆಧ್ಯಾತ್ಮಿಕ ಸ್ಥಿತಿಯನ್ನು ಕಾಪಾಡುವುದು ಹೇಗೆ ಮತ್ತು ಅದನ್ನು ಉತ್ತಮ ಪಡಿಸುವುದು ಹೇಗೆ, ತನ್ನ ಮತ್ತು ಇತರ ಸತ್ಯವಿಶ್ವಾಸಿಗಳ ಸ್ಥಿತಿಯನ್ನು ಉತ್ತಮ ಪಡಿಸುವುದು ಹೇಗೆಂದು ಯೋಚಿಸಿ ಅದಕ್ಕಾಗಿ ಪ್ರಯತ್ನಿಸುವುದಾಗಿದೆ. ಒಬ್ಬ ಸತ್ಯವಿಶ್ವಾಸಿ ಲೌಕಿಕ ಸಭೆಯಲ್ಲಿ ಭಾಗವಹಿಸುತ್ತಾ ಇದ್ದರೂ ಅವನು ಅಲ್ಲಾಹನನ್ನು ಸ್ಮರಿಸದೆ ಇರುವುದಿಲ್ಲ. ಸತ್ಯವಿಶ್ವಾಸಿ ಲೌಕಿಕ ಕೆಲಸಗಳನ್ನು ಮಾಡುವಾಗ ಸಹ ಅನಾವಶ್ಯಕ ಕೃತ್ಯಗಳಿಂದ ದೂರವಿರುತ್ತಾನೆ.

ಸತ್ಯವಿಶ್ವಾಸಿಗಳ ಸಭೆಗಳ ಬಗ್ಗೆ ಅಲ್ಲಾಹನು ನೀಡಿದ ಮಾರ್ಗದರ್ಶನವೇನೆಂದರೆ, ಅವಿಧೇಯತೆ ಮತ್ತು ವಿದ್ರೋಹಗಳಿಂದ ಮುಕ್ತವಾದ, ಪಾಪದಿಂದ ಮುಕ್ತವಾದ, ಸಂದೇಶವಾಹಕರಿಗೆ ಅವಿಧೇಯತೆ ತೋರಿಸುವುದರಿಂದ ಮುಕ್ತವಾದ ಮತ್ತು ತಖ್ವದಿಂದ ಚಲಿಸುವಂತಹ ಸಭೆ ನಡೆಸಬೇಕೆಂದಾಗಿದೆ. ಆದರೆ ಮುಸ್ಲಿಮರ ಬಹುತೇಕ ಸಭೆಗಳು ಈ ಮಾರ್ಗದರ್ಶನಗಳಿಗೆ ವಿರುದ್ಧವಾಗಿ ಜರಗಿಸಲ್ಪಡುತ್ತವೆ ಎಂಬುದು ಅತ್ಯಂತ ಖೇದಕರವಾಗಿದೆ. ಮುಸ್ಲಿಮರು ಮುಸ್ಲಿಮರನ್ನು ನಾಶಮಾಡುವ ಪ್ರಯತ್ನಗಳಲ್ಲಿ ಮಗ್ನರಾಗಿದ್ದಾರೆ ಮತ್ತು ಅದರ ಯೋಜನೆಗಳನ್ನು ರೂಪಿಸುತ್ತಾರೆ. ಆದರೆ ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತಾನೆ:

يَا أَيُّهَا الَّذِينَ آمَنُوا إِذَا تَنَاجَيْتُمْ فَلَا تَتَنَاجَوْا بِالْإِثْمِ
وَالْعُدْوَانِ وَمَعْصِيَتِ الرَّسُولِ وَتَنَاجَوْا بِالْبِرِّ
وَالتَّقْوَىٰ ۖ وَاتَّقُوا اللَّهَ الَّذِي إِلَيْهِ تُحْشَرُونَ

**ಯಾ ಅಯ್ಯುಹಲ್ಲಝೀನ ಆಮನೂ ಇಝಾ ತನಾಜಯ್‌ತುಮ್ ಫಲಾ ತತನಾಜವ್ ಬಿಲ್ ಇಸ್‌ಮಿ ವಲ್ ಉದ್‌ವಾನಿ ವ ಮಅ್‌ಸಿಯ್ಯತಿರ್‌ರಸೂಲಿ ವ ತನಾಜವ್ ಬಿಲ್ ಬಿರ್ರಿ ವತ್ತಖ್ವಾ ವತ್ತಖುಲ್ಲಾಹಲ್ಲಝೀ ಇಲೈಹಿ ತುಹ್‌ಶರೂನ್.** ಸತ್ಯ ವಿಶ್ವಾಸಿಗಳೇ, ನೀವು ರಹಸ್ಯವಾಗಿ ಸಮಾಲೋಚನೆ ನಡೆಸುವಾಗ ಪಾಪಕೃತ್ಯ ಮಾಡಲಿಕ್ಕಾಗಲಿ, ಅತಿಕ್ರಮವಾಗಿ ವರ್ತಿಸಲಿಕ್ಕಾಗಲಿ, ಸಂದೇಶವಾಹಕರ ಆಜ್ಞೆಗಳನ್ನು ಉಲ್ಲಂಘಿಸಲಿಕ್ಕಾಗಲಿ ಗೂಢಾಲೋಚನೆ ಮಾಡಬೇಡಿರಿ. ಬದಲಿಗೆ ಸತ್ಕರ್ಮ ಮಾಡಲಿಕ್ಕಾಗಿಯೂ ಭಯಭಕ್ತಿ ಹೊಂದಲಿಕ್ಕಾಗಿಯೂ ನೀವು ಪರಸ್ಪರ ಸಮಾಲೋಚಿಸಿರಿ. ನೀವು ಅಲ್ಲಾಹನಿಗೆ ಭಯಪಡಿರಿ. ಅವನ ಸನ್ನಿಧಿಯಲ್ಲೇ ನೀವು ಸೇರಿಸಲ್ಪಡುವಿರಿ. (ಪವಿತ್ರ ಖುರ್‌ಆನ್ 58:10).

ಆದರೆ ನಾನು ಹೇಳಿದ ಹಾಗೆ ಮುಸ್ಲಿಮರು ಅಲ್ಲಾಹನ ಈ ಆಜ್ಞೆಯನ್ನು ಮರೆತು ಬಿಟ್ಟಿರುವರು. ಪರಸ್ಪರ ಒಡಕು ಅದರ ಪರಾಕಾಷ್ಠೆಗೆ ತಲಪಿದೆ. ಅಲ್ಲಾಹನು ಸತ್ಯವಿಶ್ವಾಸಿಗಳ ಚಿಹ್ನೆಯಾಗಿ **ರುಹಮಾಉ ಬೈನಹುಮ್** ಎಂದು ಹೇಳಿರುವನು. ಅವರು ಪರಸ್ಪರ ಪ್ರೀತಿ ವಾತ್ಸಲ್ಯಗಳನ್ನು ಹೊಂದಿದವರಾಗಿರುತ್ತಾರೆ. ಆದರೆ ನಮಗೆ ಇಂದಿನ ಮುಸ್ಲಿಮರಲ್ಲಿ ಅಲ್ಲಾಹನು ಅವಿಶ್ವಾಸಿಗಳ ಬಗ್ಗೆ ಹೇಳಿದ ಗುಣ ಕಾಣಿಸುತ್ತದೆ. **ಖುಲೂಬುಹುಮ್ ಶತ್ತಾ** ಅವರ ಹೃದಯಗಳು ವಿಭಿನ್ನವಾಗಿರುತ್ತವೆ ಎಂದು. ಪರಸ್ಪರ ಸಮಾಲೋಚಿಸುವಾಗ, ಅನ್ಯರೊಂದಿಗೆ ಸಮಾಲೋಚಿಸುವಾಗ ಮತ್ತು ರಹಸ್ಯ ಒಪ್ಪಂದಗಳನ್ನು ಮಾಡಿಕೊಳ್ಳುವಾಗ ಸಹ ಅವರು ಅಲ್ಲಾಹನಿಗೆ ಮತ್ತು ಸಂದೇಶವಾಹಕರಿಗೆ ಅವಿಧೇಯರಾಗಿ, ತಖ್ವರಹಿತರಾಗಿ ವರ್ತಿಸುತ್ತಾರೆ. ಅವರಿಗೆ ಅಲ್ಲಾಹನ ಭಯ ಏನೂ ಇರುವುದಿಲ್ಲ. ಅಲ್ಲಾಹನು ಹೇಳುತ್ತಾನೆ, ನೀವು ಅಲ್ಲಾಹನಿಗೆ ಭಯಪಡಿರಿ. ಅವನ ಸನ್ನಿಧಿಯಲ್ಲಿ ನೀವು ಜಮಾಯಿಸಲ್ಪಡುವಿರಿ. ಅಲ್ಲಿ ಸರಕಾರಗಳಾಗಲಿ, ದೊರೆತನಗಳಾಗಲಿ, ಸಂಪತ್ತಾಗಲೀ, ಪಶ್ಚಿಮದ ಶಕ್ತಿಗಳ ಆಶೀರ್ವಾದಗಳಾಗಲೀ ಯಾವ ಪ್ರಯೋಜನವನ್ನೂ ನೀಡಲಾರದು. ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳನ್ನು ಉಲ್ಲಂಘಿಸಿದುದಕ್ಕೆ ಮತ್ತು ತಖ್ವದಿಂದ ದೂರ ಸರಿದುದಕ್ಕೆ ಲಭಿಸುವ ಶಿಕ್ಷೆಯಿಂದ ಯಾವುದೇ ಬಲಿಷ್ಟ ರಾಷ್ಟ್ರ ಅಲ್ಲಿ ನಿಮ್ಮನ್ನು ರಕ್ಷಿಸಲಾರದು.

ಅಲ್ಲಾಹನ ಅಸ್ತಿತ್ವದ ಬಗ್ಗೆ ದೃಢ ವಿಶ್ವಾಸ ಸಂಪೂರ್ಣವಾಗಿ ನಾಶಗೊಂಡಿದೆ. ಏಕೆಂದರೆ ಅಲ್ಲಾಹನ ಬಗ್ಗೆ ಸ್ವಲ್ಪವಾದರೂ ದೃಢ ವಿಶ್ವಾಸವಿರುತ್ತಿದ್ದರೆ ಮುಸ್ಲಿಮ್ ರಾಜಕಾರಣಿಗಳ ಮತ್ತು ನಾಯಕರ ಸ್ಥಿತಿ ಇಂದು ನಾವು ಕಾಣುವ ರೀತಿಯಲ್ಲಿರುತ್ತಿರಲಿಲ್ಲ ಮತ್ತು ಆಲಿಮ್ ನಾಮಧೇಯರಾದ ಮತಪಂಡಿತರ ಸ್ಥಿತಿ ಇಂದು ನಾವು ಕಾಣುವ ರೀತಿಯಲ್ಲಿರುತ್ತಿರಲಿಲ್ಲ. ಆದುದರಿಂದ ಇಂದಿನ ಕಾಲದಲ್ಲಿ ನಾವು ಸಹ ಕಡ್ಡಾಯವಾಗಿ ಮಾಡಬೇಕಾದುದೇನೆಂದರೆ ನಾವು ಇಂತಹ ಕೆಟ್ಟ ಯೋಚನೆಗಳಿಂದ ನಮ್ಮನ್ನು ಮುಕ್ತರನ್ನಾಗಿ ಮಾಡಿ ಪರಿಶುದ್ಧರಾಗಬೇಕಲ್ಲದೆ ಅಲ್ಲಾಹನ ಬಗ್ಗೆ ಭಯವನ್ನು ನಮ್ಮೊಳಗೆ ವರ್ಧಿಸಬೇಕು. ನಾವು ಸಂಪರ್ಕ ಇಟ್ಟುಕೊಂಡಿರುವ ಅಹ್ಮದಿಯೇತರ ಮುಸ್ಲಿಮರಿಗೆ ನಮಗೆ ಸಾಧ್ಯವಿರುವಷ್ಟು ಮಟ್ಟಿಗೆ ಮನವರಿಕೆ ಮಾಡಿಕೊಡಬೇಕು. ನಿಮ್ಮ ಈ ಸ್ಥಿತಿ ನಿಮ್ಮನ್ನು ಮುಸ್ಲಿಮೇತರರ ದಾಸತ್ವಕ್ಕೊಯ್ಯುವುದು ಮಾತ್ರವಲ್ಲ ನೀವು ಅಲ್ಲಾಹನ ಶಿಕ್ಷೆಗೂ ಪಾತ್ರರಾಗುವಿರಿ. ನೀವು ಯಾವ ಲೌಕಿಕ ಲಾಭವನ್ನು ಹಿಂಬಾಲಿಸುತ್ತಿರುವಿರೋ ಅದು ಸಹ ನಿಮಗೆ ಕೈಬಿಟ್ಟು ಹೋಗುವುದು. ನೀವು ಧರ್ಮವನ್ನು ಮೊದಲೇ ತ್ಯಜಿಸಿ ಬಿಟ್ಟಿರುವಿರಿ. ಆದುದರಿಂದ ನೀವು ಅಲ್ಲಾಹನ ಬಗ್ಗೆ ಭಯಭಕ್ತಿಯನ್ನು ಹೃದಯಗಳಲ್ಲಿ ಸ್ಥಾಪಿಸಿರಿ. ಹಾಗೆ ಮಾಡದಿದ್ದರೆ ನೀವು ಎಲ್ಲವನ್ನೂ ಕಳೆದುಕೊಳ್ಳುವಿರಿ.

ಲೌಕಿಕ ಸಮಾಲೋಚನೆಗಳನ್ನು ನಡೆಸುವ ಒಂದು ಸಭೆ ಸಂಯುಕ್ತರಾಷ್ಟ್ರ ಸಂಘ (UNO) ಆಗಿದೆ. ಇತ್ತೀಚೆಗೆ ಜನರಲ್ ಅಸೆಂಬ್ಲಿಯ ಒಂದು ಸಮಾವೇಶದಲ್ಲಿ ಅಮೇರಿಕದ ಅಧ್ಯಕ್ಷ ಭಾಷಣ ಮಾಡಿದರು. ಪಾಶ್ಚಿಮಾತ್ಯ ವಿಮರ್ಶಕರು ಈ ಭಾಷಣದ ಬಗ್ಗೆ ಹೀಗೆ ಬರೆದರು: ಈ ಭಾಷಣದಿಂದ ಶಾಂತಿ ಸ್ಥಾಪನೆಗೆ ಬದಲಾಗಿ ಗಲಬೆಗೊಂದಲಗಳು ತಲೆದೋರುವ ಹೆಚ್ಚು ಸಾಧ್ಯತೆಗಳಿವೆ ಎಂದು. ಪ್ರಾಯಶಃ ಈ ಭಾಷಣದಿಂದ ಸೌದಿ ಅರೇಬಿಯಾ ಮತ್ತು ಕೆಲವು ಮುಸ್ಲಿಮ್ ದೇಶಗಳು ಸಂತೋಷಗೊಂಡಿರಬಹುದು. ಅಧ್ಯಕ್ಷರ ಭಾಷಣ ಅತ್ಯಂತ ನಿರಾಶದಾಯಕವೂ ಯುದ್ಧವನ್ನೂ ಅಸ್ತವ್ಯಸ್ಥತೆಯನ್ನೂ ಬಡಿದೆಬ್ಬಿಸುವಂತಹದ್ದೂ ಆಗಿದೆ ಎಂದು ಅವರು ಬರೆದರು. ಆದುದರಿಂದ ಮುಸ್ಲಿಮ್ ದೇಶಗಳು ಅಲ್ಲಾಹನ ಆಜ್ಞೆಗಳನ್ನು ಪಾಲಿಸಬೇಕಾಗಿದೆ. ಎಲ್ಲಾ ರೀತಿಗಳ ಅಸ್ತವ್ಯಸ್ತತೆಗಳಿಂದ ರಕ್ಷಣೆ ಪಡೆಯಬೇಕಾಗಿದೆ.

ನಾನು ಮುಸ್ಲಿಮ್ ಲೋಕದ ಇಂದಿನ ಸಾಮಾನ್ಯ ಸ್ಥಿತಿಯ ಬಗ್ಗೆ ಮಾತನಾಡಿದೆ. ಆದರೆ ನಾವು ನಮ್ಮ ಸ್ಥಿತಿಯ ಬಗ್ಗೆಯೂ ಪರಿಶೋಧಿಸುತ್ತಾ ಇರಬೇಕಾಗಿವೆ. ಜಮಾಅತ್ ಅಭಿವೃದ್ಧಿ ಹೊಂದುತ್ತಾ ಇರುವುದನ್ನು ಶೈತಾನನು ಸಹಿಸಲಾರನು ಎಂದು ಯಾವಾಗಲೂ ನೆನಪಿಡಬೇಕು. ಶೈತಾನ್ ತನ್ನ ಪ್ರಕೃತಿಗೆ ಅನುಸಾರವಾಗಿ ನಮ್ಮ ಜಮಾಅತಿನೊಳಗೆ ಸಹ ಹತಾಶೆ ಸೃಷ್ಟಿಸಲು ಮತ್ತು ಒಡಕ್ಕನ್ನುಂಟುಮಾಡಲು ಪ್ರಯತ್ನಿಸುತ್ತಾ ಇರುತ್ತಾನೆ. ಕೆಲವು ಜನರು ಒಟ್ಟಿಗೆ ಕುಳಿತುಕೊಂಡು ಕೆಲವು ಸಾರಿ ಸ್ಥಳೀಯ ಜಮಾಅತಿನ ನಿಝಾಮ್ ಬಗ್ಗೆ ಅಥವಾ ದೇಶದ ನಿಝಾಮ್ ಬಗ್ಗೆ ಮಾತನಾಡುತ್ತಾರೆ. ಅವರು ಶೈತಾನನ ದುಷ್ಪ್ರೇರಣೆಗಳಿಗೆ ಪಾತ್ರರಾಗುತ್ತಾರೆ. ಶೈತಾನನ ಕೆಲಸ ಹಿತೈಷಿಯಾಗಿ ಬಂದು ಆಕ್ರಮಣ ಮಾಡುವುದಾಗಿದೆ. ಆದಕಾರಣ ಅಂತಹ ಸಭೆಗಳಲ್ಲಿ ಜಮಾಅತಿನ ನಿಝಾಮಿಗೆ ವಿರುದ್ಧವಾಗಿಲ್ಲದ ಜನರು ಸಹ ಸೇರುತ್ತಾರೆ. ಅಲ್ಲಲ್ಲಿ ಸಭೆ ಸೇರಿ ಮಾತನಾಡುವುದು, ಬಹಳ ರಹಸ್ಯ ಹೇಳುವ ರೀತಿಯಲ್ಲಿ ಮಾತನಾಡುವುದು, ಬಹಳ ಮುಖ್ಯ ವಿಷಯ ಹೇಳುವುದಾಗಿ ನಟಿಸುವುದು, ಜಮಾಅತಿನ ಬಗ್ಗೆ ನೋವನ್ನು ಹೊಂದಿ ಮಾತನ್ನು ಹೇಳುತ್ತಿರುವುದಾಗಿ ಪ್ರಸ್ತಾಪಿಸುವುದು, ಸಂಪೂರ್ಣ ತಪ್ಪು ಕೆಲಸವಾಗಿದೆ. ಅದು ಪಾಪ ಕೃತ್ಯವೂ ಅಲ್ಲಾಹನಿಗೆ ಮತ್ತು ಸಂದೇಶವಾಹಕರಿಗೆ ಅವಿಧೇಯತೆಯೂ ತಖ್ವದಿಂದ ದೂರವಾಗಿರುವ ಕೆಲಸವೂ ಆಗಿದೆ. ಇಂತಹ ಸಭೆಗಳ ಬಗ್ಗೆ ಅಲ್ಲಾಹನು ಎಚ್ಚರಿಕೆ ನೀಡಿದ್ದಾನೆ. ಅವುಗಳಿಂದ ದೂರವಿರಬೇಕೆಂದು ಆಜ್ಞಾಪಿಸಿದ್ದಾನೆ. ಯಾವುದಾದರೂ ಹುದ್ದೇದಾರರ ಬಗ್ಗೆ ಅಥವಾ ಯಾವುದಾದರೂ ಅಮೀರ್ ಬಗ್ಗೆ ದೂರು ಇದ್ದರೆ ಆ ದೂರನ್ನು ಕೇಂದ್ರಕ್ಕೆ ಸಲ್ಲಿಸಿರಿ ಅಥವಾ ಆಯಾಕಾಲದ ಖಲೀಫರಿಗೆ ತಲಪಿಸಿರಿ. ಹೀಗೆ ಮಾಡಿದ ನಂತರ ಜಮಾಅತಿನ ಸದಸ್ಯರ ಕೆಲಸ ಮುಗಿಯುತ್ತದೆ. ಈ ವಿಷಯದ ಬಗ್ಗೆ ಏನು ಮಾಡಬೇಕೆಂಬುದು ಆಯಾಕಾಲದ ಖಲೀಫರ ಕೆಲಸವಾಗಿದೆ. ಆದರೆ ಪ್ರತಿಯೊಬ್ಬ ಅಹ್ಮದಿ ಪ್ರಾರ್ಥಿಸುತ್ತಾ ಇರಬೇಕು. ಎಲ್ಲ ವಿಧಗಳ ಕೆಡುಕುಗಳನ್ನು ಜಮಾಅತಿನಿಂದ ನೀಗಿಸಲಿ ಎಂದು ನೋವುಭರಿತ ಹೃದಯದೊಂದಿಗೆ ಪ್ರಾರ್ಥಿಸಬೇಕು. ತಖ್ವವನ್ನು ಅವಲಂಬಿಸಿ ವರ್ತಿಸುವವರು ಮತ್ತು ಸರಿಯಾಗಿ ಕೆಲಸ ಮಾಡುವವರು ಜಮಾಅತಿಗೆ ಯಾವಾಗಲೂ ದೊರಕಲಿ ಎಂದು ಪ್ರಾರ್ಥಿಸುತ್ತಾ ಇರಬೇಕು.

ಪ್ರತಿಯೊಬ್ಬ ಅಹ್ಮದಿ ಒಂದು ಮುಖ್ಯ ವಿಷಯವನ್ನು ಯಾವಾಗಲೂ ನೆನಪಿಟ್ಟುಕೊಳ್ಳಬೇಕು. ಅಲ್ಲಾಹನು ಜಮಾಅತಿಗೆ ಅಭಿವೃದ್ಧಿ ನೀಡುತ್ತಾ ಇರುವಾಗ ಶೈತಾನನು ಸಹ ತನ್ನ ಕೆಲಸ ಮಾಡುತ್ತಾ ಇರುತ್ತಾನೆ. ಶೈತಾನನು ಮೊದಲನೆಯ ದಿನದಿಂದಲೇ ಅಲ್ಲಾಹನ ಮುಂದೆ ಹೇಳಿದ್ದನು ಮತ್ತು ಅನುಮತಿ ಪಡೆದಿದ್ದನು ಸತ್ಯವಿಶ್ವಾಸಿಗಳನ್ನು ಮೋಸಗೊಳಿಸುವ ಕೆಲಸ ಮಾಡುವೆನೆಂದು. ಅಹ್ಮದಿಯಾ ಜಮಾಅತಿನ ಶತ್ರುಗಳು ಬಹಿರಂಗವಾಗಿ ಜಮಾಅತಿಗೆ ವಿರೋಧವಾಗಿ ಯೋಜನೆಗಳನ್ನು ಮಾಡುತ್ತಾ ಇರುತ್ತಾರೆ. ಮತ್ತು ಅದನ್ನು ಮುಂದುವರಿಸುವರು. ಅವರು ಸಹಾನುಭೂತಿಯ ಹೆಸರಲ್ಲಿ ಸಾಮಾನ್ಯರನ್ನು ಮತ್ತು ಬಲಹೀನ ವಿಶ್ವಾಸಿಗಳನ್ನು ಜಮಾಅತಿನಲ್ಲಿ ಕಲಹವುಂಟುಮಾಡಲು ತಮ್ಮ ಉಪಕರಣಗಳಾಗಿ ಬಳಸುತ್ತಾರೆ. ಪ್ರತಿಯೊಬ್ಬ ಅಹ್ಮದಿ ಇದರ ಬಗ್ಗೆ ಜಾಗರೂಕರನಾಗಿರಬೇಕು. ಅಲ್ಲಾಹನು ಜಮಾಅತನ್ನು ಎಲ್ಲಾ ಆಂತರಿಕ ಮತ್ತು ಬಾಹ್ಯ ಪಿತೂರಿಗಳಿಂದ ಯಾವಾಗಲೂ ರಕ್ಷಿಸುವವನಾಗಲಿ. ಯಾವಾಗಲೂ ಒಳಿತು ಮತ್ತು ತಖ್ವ ಭರಿತ ಸಭೆಗಳಲ್ಲಿ ಕುಳಿತುಕೊಳ್ಳುವ ಮತ್ತು ಅದರ ಭಾಗವಾಗಲು ಭಾಗ್ಯ ನೀಡಲಿ. ಪಾಪ, ಅವಿಧೇಯತೆ ಮತ್ತು ಸಂದೇಶವಾಹಕರ ಆಜ್ಞೆಗಳನ್ನು ಉಲ್ಲಂಘಿಸುವ ಮತ್ತು ತಖ್ವದಿಂದ ದೂರವಾದ ಸಭೆಗಳಲ್ಲಿ ಕುಳಿತುಕೊಳ್ಳುವಂತೆ ಮಾಡದಿರಲಿ.

ಸಭೆಗಳ ವಿವಿಧ ಸ್ಥಿತಿಗಳ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮತ್ತು

ಅವರ ಸತ್ಯಸಂಧನಾದ ಸೇವಕರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳಿವೆ. ಅವುಗಳಲ್ಲಿ ಕೆಲವನ್ನು ಈಗ ನಿಮ್ಮ ಮುಂದೆ ಇರಿಸುವೆನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಯಾವುದಾದರೂ ಸಭೆಯಲ್ಲಿ ಅಲ್ಲಾಹನ ಬಗ್ಗೆ ಮತ್ತು ಅವನ ಸಂದೇಶವಾಹಕರ ಬಗ್ಗೆ ಪರಿಹಾಸದ ಮಾತುಗಳು ನಡೆಯುತ್ತಿದ್ದರೆ ಅಲ್ಲಿಂದ ಎದ್ದು ಹೋಗಿ ಆ ಜನರೊಂದಿಗೆ ಸೇರಿಲ್ಲ ಎಂದು ಸೂಚಿಸಿರಿ. ಅಥವಾ ಅದಕ್ಕೆ ಸ್ಪಷ್ಟವಾಗಿ ಉತ್ತರ ನೀಡಿರಿ. ಸಭೆಯಲ್ಲಿ ಕುಳಿತುಕೊಂಡು ಜನರಿಗೆ ಮೆಚ್ಚುಗೆಯಾಗುವಂತೆ ವರ್ತಿಸುವುದು ಮತ್ತು ಭಯದಿಂದ ಹೂಂಗುಟ್ಟುವುದು, ಅನಂತರ ಮೆಲ್ಲಗೆ ನೀವು ಹೇಳಿದುದು ತಪ್ಪು ಎಂದು ಹೇಳುವುದು, ಸರಿಯಾದ ರೀತಿಯಲ್ಲಿ ಸ್ಪಷ್ಟವಾಗಿ ನೀವು ನಿಮ್ಮ ಅಭಿಪ್ರಾಯ ಪ್ರಕಟಣೆ ಮಾಡದಿರುವುದು ಕಾಪಟ್ಯವಾಗಿದೆ. ಅದು ಸತ್ಯವಿಶ್ವಾಸಿ ಮಾಡುವ ಕೆಲಸವಲ್ಲ. ಅಲ್ಲಾಹು, ಅವನ ಸಂದೇಶವಾಹಕ ಮತ್ತು ಜಮಾಅತ್ ನಿಝಾಮ್ ವಿರುದ್ಧವಾದ ಮಾತುಗಳನ್ನು ಕಠಿಣವಾಗಿ ಖಂಡಿಸಬೇಕಾದುದು ಸತ್ಯವಿಶ್ವಾಸಿಗೆ ಯೋಗ್ಯವಾದ ರೀತಿಯಾಗಿದೆ. ಆ ಮಾತುಗಳನ್ನಾಡುವವರೊಂದಿಗೆ ಹೇಳಿರಿ. ನೀವು ಹೇಳುವುದು ನಿಮ್ಮ ಯೋಚನೆ ಪ್ರಕಾರ ಸರಿಯಾಗಿದ್ದರೆ ನೀವು ಖಲೀಫರಿಗೆ ಮತ್ತು ಜಮಾಅತಿನ ನಿಝಾಮಿಗೆ ತಿಳಿಸಿರಿ. ಆದರೆ ನೀವು ಈ ರೀತಿ ಮಾತನಾಡುವುದು ಸರಿಯಾದ ಕ್ರಮವಲ್ಲ ಎಂದು ಹೇಳಿರಿ. ಆದರೆ. ಇಂತಹ ಸಭೆಗಳಲ್ಲಿ ಕುಳಿತು, ತಗ್ಗಿದ ಸ್ವರದಲ್ಲಿ ಖಂಡಿಸುವುದು ಮತ್ತು ಸ್ಪಷ್ಟವಾಗಿ ಖಂಡಿಸದಿರುವುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಪ್ರಕಾರ ಕಾಪಟ್ಯವಾಗುತ್ತದೆ. ಇದರಿಂದ ಸತ್ಯವಿಶ್ವಾಸಿ ತನ್ನನ್ನು ರಕ್ಷಿಸಿಕೊಳ್ಳಬೇಕು. ಧರ್ಮಕ್ಕೆ ಸಂಬಂಧಿಸಿ ಮತ್ತು ನಿಝಾಮ್‌ಗೆ ಸಂಬಂಧಿಸಿ ಎಂದೂ ನಿರಭಿಮಾನದಿಂದ ವರ್ತಿಸಬಾರದು. ಅಭಿಮಾನ ಪ್ರಕಟಿಸುವುದು ಬಹಿರಂಗವಾಗಿ ಉತ್ತರ ನೀಡುವ ಮೂಲಕ ಅಥವಾ ಆ ಸಭೆಯಿಂದ ಎದ್ದು ಹೋಗುವ ಮೂಲಕವಾಗಿದೆ. ಇದರ ಬಗ್ಗೆ ಅಲ್ಲಾಹನು ಹೇಳಿದ್ದಾನೆ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ಹೇಳಿದ್ದಾರೆ.

ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಒಬ್ಬ ಸಹಾಬಿ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ನನಗೆ ಯಾವುದಾದರೂ ಉಪದೇಶ ನೀಡಿರಿ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀವು ಅಲ್ಲಾಹನಿಗೆ ಭಯಭಕ್ತಿ ತೋರಿಸುವವರಾಗಿರಿ. ನೀವು ಅನ್ಯರ ಸಭೆಗೆ ಹೋದಾಗ ಅಲ್ಲಿ ನಿಮಗೆ ಇಷ್ಟವಾದ ಮಾತುಗಳು ನಡೆಯುತ್ತಿದ್ದರೆ ಕಲಹದ ಮಾತುಗಳು ನಡೆಯುತ್ತಾ ಇಲ್ಲವಾದರೆ ನೀವು ಅಲ್ಲಿ ಕುಳಿತುಕೊಳ್ಳಿರಿ. ನೀವು ಇಷ್ಟಪಡದ ಮಾತುಗಳನ್ನು ಅವರು ಆಡುತ್ತಿದ್ದರೆ ಅಲ್ಲಿಂದ ಎದ್ದು ಬನ್ನಿರಿ. ಇನ್ನೊಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ. ಒಬ್ಬರು ಪ್ರಶ್ನಿಸಿದರು ನಾವು ಯಾರ ಸಭೆಗಳಲ್ಲಿ ಕುಳಿತುಕೊಳ್ಳಬಹುದು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಯಾವ ಜನರನ್ನು ನೋಡಿದರೆ ನಿಮಗೆ ಅಲ್ಲಾಹನ ನೆನಪಾಗುತ್ತಿದೆಯೋ, ಯಾರ ಮಾತುಗಳಿಂದ ನಿಮ್ಮ ಧಾರ್ಮಿಕ ಜ್ಞಾನ ವರ್ಧಿಸುತ್ತದೆಯೋ, ಯಾರ ಕೆಲಸಗಳು ನಿಮಗೆ ಪರಲೋಕವನ್ನು ಜ್ಞಾಪಿಸುವಂತೆ ಮಾಡುತ್ತದೆಯೋ ಅಂತಹ ಜನರ ಸಭೆಗಳಲ್ಲಿ ಕುಳಿತುಕೊಳ್ಳಿರಿ. ಒಬ್ಬ ಸತ್ಯವಿಶ್ವಾಸಿ ತಾನು ಕುಳಿತುಕೊಳ್ಳುವ ಸಭೆಯನ್ನು ಆಯ್ಕೆ ಮಾಡುವಾಗ ಈ ತತ್ವಗಳನ್ನು ತನ್ನ ಮುಂದೆ ಇರಿಸಬೇಕು. ಕೇವಲ ಲೌಕಿಕ ಜನರ ಸಭೆಗಳನ್ನು ಸತ್ಯವಿಶ್ವಾಸಿ ಇಷ್ಟಪಡಬಾರದು. ಅಂತಹ ಸಭೆಗಳಿಂದ ಕೂಡಲೇ ಎದ್ದು ಬರಬೇಕು. ಇದರ ಬಗ್ಗೆ ಶ್ರದ್ಧೆ ನೀಡುವುದಾದರೆ ನಮ್ಮ ದೊಡ್ಡವರೂ ನಮ್ಮ ಯುವಕರೂ ಅನೇಕ ಕೆಡುಕುಗಳಿಂದ ರಕ್ಷಣೆ ಪಡೆಯುವರು.

ಕೆಲವು ಸಾರಿ ನಮ್ಮ ಜಮಾಅತಿನಲ್ಲಿಯೂ ಎಂತಹ ಘಟನೆಗಳು ನಡೆಯುತ್ತಿವೆ ಎಂದರೆ ಕೆಟ್ಟ ಸಹವಾಸ ಮತ್ತು ಕೆಟ್ಟ ಕೂಟಗಳ ಕಾರಣದಿಂದ ಯುವಕರು ಯೌವ್ವನಾವಸ್ಥೆಯನ್ನು ತಲಪುವಾಗ ಅನ್ಯರಿಗೆ ಹಾನಿಯುಂಟುಮಾಡುವ ಕೆಲಸ ಮಾಡುತ್ತಾರೆ. ನೆರೆಹೊರೆಯವರಿಗೆ ಮತ್ತು ಮಾರ್ಗದಲ್ಲಿ ನಡೆದು ಹೋಗುವವರಿಗೆ ಹಾನಿ ಉಂಟುಮಾಡುತ್ತಾರೆ. ಎಲ್ಲಿಗಾದರೂ ಹೋದಾಗ ಅಲ್ಲಿ ಸಹ ಹಾನಿ ಉಂಟುಮಾಡುತ್ತಾರೆ. ಅವರು ಅಹ್ಮದಿಯರೆಂದು ತಿಳಿದರೆ ಜಮಾಅತಿಗೆ ಸಹ ಅಪಕೀರ್ತಿ ಉಂಟಾಗುತ್ತದೆ. ಆದುದರಿಂದ ತಂದೆ ತಾಯಂದಿರು ತಮ್ಮ ಮಕ್ಕಳ ಕೂಟಗಳ ಬಗ್ಗೆ ಮತ್ತು ಸಹಚರರ ಬಗ್ಗೆ ದೃಷ್ಟಿ ಇರಿಸಬೇಕು. ಯೌವ್ವನಾವಸ್ಥೆಯನ್ನು ಪ್ರವೇಶಿಸುವಾಗ ಕೆಟ್ಟ ಸಹವಾಸದಿಂದ ದೂರ ಸರಿಯಲು ಪ್ರಯತ್ನಿಸಬೇಕು. ಮನೆಗಳಲ್ಲಿ ಸಹ ಧಾರ್ಮಿಕವಾಗಿ ಉತ್ತಮವಾಗಿರುವ ಸಭೆಗಳನ್ನು ಏರ್ಪಡಿಸಬೇಕು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಯಾವುದಾದರೂ ಸಮುದಾಯ ಮಸ್‌ಜಿದ್‌ನಲ್ಲಿ ಪವಿತ್ರ ಖುರ್‌ಆನ್ ಪಠಿಸಲು ಮತ್ತು ದರ್ಸ್ ನೀಡಲು ಜಮಾಯಿಸಿದರೆ ಅಲ್ಲಾಹನು ಅವರಿಗೆ ಸಾಂತ್ವನವನ್ನು ನೀಡುತ್ತಾನೆ. ಅಲ್ಲಾಹನ ಅನುಗ್ರಹ ಅವರನ್ನು ಆವರಿಸುತ್ತದೆ. ದೇವದೂತರು ಅವರನ್ನು ತಮ್ಮ ಸಂರಕ್ಷಣೆಯಲ್ಲಿ ಇರಿಸುತ್ತಾರೆ. ನಮ್ಮ ಜಮಾಅತಿಗೆ ಇಂತಹ ಸಂದರ್ಭಗಳು ದೊರೆಯುತ್ತಾ ಇರುವುದು ಅಲ್ಲಾಹನ ಅನುಗ್ರಹವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೀಗೆ ಸಹ ಹೇಳಿದರು: ಒಂದು ಸಭೆಯಲ್ಲಿ ಕುಳಿತಾಗ ಅಲ್ಲಿ ಅಲ್ಲಾಹನ ನಾಮಸ್ಮರಣೆ ಮಾಡದಿದ್ದರೆ ಖಿಯಾಮತ್ ದಿನದಂದು ಅವರು ಆ ಸಭೆಯನ್ನು ದುಃಖದಿಂದ ಕಾಣುವರು. ಆದುದರಿಂದ ಜಮಾಅತಿನ ಇಜ್ತಿಮಾಗಳಿಗೆ ಆಗಮಿಸುವವರು ತಮ್ಮ ಆಗಮನದ ಉದ್ದೇಶವನ್ನು ಈಡೇರಿಸುವ ಬಗ್ಗೆ ನೆನಪಿಡಬೇಕು. ಅವರು ನಗುತ್ತಾ ಹರಟೆ ಹೊಡೆಯುತ್ತಾ ತಮ್ಮ ಸಮಯ ವಿನಿಯೋಗಿಸಬಾರದು. ಅವರು ಝಿಕ್ರೆ ಇಲಾಹಿ ಮಾಡುತ್ತಾ ಇರಬೇಕು. ಒಳಿತಿನ ಮಾತುಗಳನ್ನು ಆಡುತ್ತಾ ಆಲಿಸುತ್ತಾ ಸಮಯ ಕಳೆಯಬೇಕು. ಹಾಗೆ ನಮ್ಮ ಸಭೆಗಳು ಖಿಯಾಮತ್ ದಿನ ದುಃಖದಿಂದ ನೋಡುವ ಸಭೆಗಳಾಗದಿರಲಿ. ಒಂದು ಹದೀಸಿನಲ್ಲಿ ಹೀಗೆ

ವರದಿಯಾಗಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನೀವು ಸತ್ಯವಿಶ್ವಾಸಿಗಳ ಹೊರತು ಬೇರೆ ಯಾರ ಜೊತೆಯಲ್ಲೂ ಕುಳಿತುಕೊಳ್ಳಬೇಡಿರಿ. ಮುತ್ತಖಿಯ ಹೊರತು ಬೇರೆ ಯಾರೂ ನಿಮ್ಮ ಊಟ ಮಾಡದಿರಲಿ. ಇದರ ಅರ್ಥವೇನೆಂದರೆ, ನಿಮ್ಮ ಗಾಢವಾದ ಸ್ನೇಹ, ನೀವು ಸಹವಾಸ ಮಾಡುವುದು, ನಿಮ್ಮ ಸಭೆಗಳು ವಿಶ್ವಾಸದಲ್ಲಿ ದೃಢವಾಗಿರುವವರ ಜೊತೆಗಿರಬೇಕು. ಅವರು ತಖ್ವವನ್ನು ಹೊಂದಿರುವವರಾಗಿರಬೇಕು. ಆ ಮೂಲಕ ನೀವು ಒಳಿತಿನಲ್ಲೂ ತಖ್ವದಲ್ಲಿಯೂ ಮುಂದೆ ಸಾಗುವವರಾಗುವಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: ಆತ್ಮ ಪರಿಷ್ಕರಣೆಯ ಒಂದು ವಿಧಾನ ಅಲ್ಲಾಹನು ಹೇಳಿರುವುದು– **ಕೂನೂ ಮಅಸ್ಸಾದಿಖೀನ್**. ಯಾರು ನಡೆನುಡಿಗಳಲ್ಲಿ ಸತ್ಯದಲ್ಲಿ ನೆಲೆನಿಂತಿರುವರೋ ಅವರ ಜೊತೆಗೆ ಸೇರಿರಿ. ಸಹವಾಸ ಬಹಳ ಪ್ರಭಾವಶಾಲಿಯಾಗಿದೆ. ಅದು ಒಳಗಿಂದೊಳಗೆ ಪ್ರಭಾವ ಬೀರುತ್ತದೆ. ಒಬ್ಬನು ಮದ್ಯಶಾಲೆಗೆ ಹೋಗುತ್ತಿರುವನಾದರೆ ಅವನು ಎಷ್ಟು ಸಂಯಮನದಿಂದ ವರ್ತಿಸಿ ನಾನು ಮದ್ಯಪಾನ ಮಾಡಲಾರೆ ಎಂದು ಹೇಳಿದರೂ ಅವನು ಮುಂದೆ ಒಂದು ದಿನ ಖಂಡಿತ ಮದ್ಯಪಾನ ಮಾಡುವನು. ಆದುದರಿಂದ ನೀವು ಯಾವಾಗಲೂ ಕೆಟ್ಟ ಸಹವಾಸದಿಂದ ದೂರಸರಿಯಬೇಕಾದುದು ಆವಶ್ಯಕವಾಗಿದೆ.

ಸಾಮಾನ್ಯ ಲೌಕಿಕ ವ್ಯವಹಾರಗಳಲ್ಲಿ ಅನ್ಯರೊಂದಿಗೆ ಸಂಪರ್ಕ ಉಂಟಾಗುತ್ತದೆ. ಆದರೆ ಈ ಸಂಪರ್ಕ ಮಿತವಾಗಿರಬೇಕು. ಅವರ ನಿರರ್ಥಕವಾದ ಸಭೆಗಳಿಗೆ ಹೋಗಬಾರದು. ಇದರ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೀಗೆ ಹೇಳಿದ್ದಾರೆ: ನೀವು ಧರ್ಮರಹಿತರೊಂದಿಗೆ ಹೆಚ್ಚು ಸಹವಾಸ ಮಾಡುತ್ತಿದ್ದು ಅವರೊಂದಿಗೆ ಊಟ ಸಹ ಮಾಡುತ್ತಿದ್ದರೆ ನಿಮ್ಮನ್ನು ಅದು ಧರ್ಮದಿಂದಲೂ ತಖ್ವದಿಂದಲೂ ದೂರ ಸರಿಸುವುದು. ಆದರೆ ತಬ್ಲೀಗ್‌ಗೋಸ್ಕರ ಮತ್ತು ಸದುಪದೇಶ ನೀಡಲು ಅವರೊಂದಿಗೆ ಸಂಪರ್ಕ ಇರಿಸಬೇಕು. ಅವರನ್ನು ನಿಮ್ಮ ಸಭೆಗಳಿಗೆ ಕರೆದುಕೊಂಡು ಬರಬೇಕು. ಏಕೆಂದರೆ ಒಳ್ಳೆಯವರ ಸಭೆ ಉತ್ತಮ ಪ್ರಭಾವ ಬೀರುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಜನರು ಒಬ್ಬ ಸತ್ಯವಂತನ ಹತ್ತಿರ ಕುಳಿತುಕೊಳ್ಳುವಾಗ ಸತ್ಯ ಅವರ ಮೇಲೆ ಪ್ರಭಾವ ಬೀರುತ್ತದೆ. ಯಾರು ಸತ್ಯವಂತರನ್ನು ಬಿಟ್ಟು ಕೆಟ್ಟವರ ಮತ್ತು ದುಷ್ಕರ್ಮಿಗಳ ಸಹವಾಸ ಮಾಡುತ್ತಾನೋ ಅವನಲ್ಲಿ ಕೆಟ್ಟ ಪ್ರಭಾವ ಉಂಟಾಗುತ್ತದೆ. ಇದೇ ಕಾರಣದಿಂದ ಕೆಟ್ಟವರ ಸಹವಾಸ ಮಾಡದಿರಲು ಪವಿತ್ರ ಖುರ್‌ಆನ್ ಮತ್ತು ಹದೀಸ್ ಒತ್ತಿ ಹೇಳಿವೆ. ಎಲ್ಲಿ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಬಗ್ಗೆ ಅಪಮಾನ ಮಾಡಲಾಗುತ್ತಿದೆಯೋ ಅಲ್ಲಿಂದ ಕೂಡಲೆ ಎದ್ದು ಹೋಗಲು ಆಜ್ಞಾಪಿಸಲಾಗಿದೆ. ಎದ್ದು ಹೋಗದವನು ಅವರೊಂದಿಗೆ ಸೇರಿದವನಾಗಿ ಗಣಿಸಲ್ಪಡುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೂ ಹೇಳುತ್ತಾರೆ: ಸತ್ಯವಂತರ ಜೊತೆಗಿರುವವನು ಅವರೊಂದಿಗೆ ಸಹಭಾಗಿಯಾಗುತ್ತಾನೆ. ಆದುದರಿಂದ **ಕೂನೂ ಮಅಸ್ಸಾದಿಖೀನ್** ಎಂಬ ಪರಿಶುದ್ಧ ಆಜ್ಞೆಯನ್ನು ಪಾಲಿಸುವುದು ಆವಶ್ಯಕವಾಗಿದೆ. ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಅಲ್ಲಾಹನು ಮಲಕ್‌ಗಳನ್ನು ಲೋಕಕ್ಕೆ ಕಳುಹಿಸುತ್ತಾನೆ. ಅವರು ಪರಿಶುದ್ಧ ಜನರ ಸಭೆಗಳಿಗೆ ಹೋಗಿ ನೋಡುತ್ತಾರೆ. ಅವರು ಮರಳಿ ಹೋದಾಗ ಅಲ್ಲಾಹನು ಅವರೊಡನೆ ನೀವು ಏನನ್ನು ನೋಡಿದಿರಿ ಎಂದು ವಿಚಾರಿಸುತ್ತಾನೆ. ಆಗ ಅವರು ನಾವು ಒಂದು ಸಭೆಯನ್ನು ನೋಡಿದೆವು ಅಲ್ಲಿ ನಿನ್ನ ಝಿಕ್ರ್ ಮಾಡಲಾಗುತ್ತಿತ್ತು. ಅಲ್ಲಿ ಒಬ್ಬ ನಿನ್ನ ಝಿಕ್ರ್ ಮಾಡುವವರಲ್ಲಿ ಸೇರಿರಲಿಲ್ಲ. ಆದರೆ ಅಲ್ಲಿ ಕುಳಿತಿದ್ದನು. ಆಗ ಅಲ್ಲಾಹನು ಹೇಳಿದನು, ಅವನು ಸಹ ಅವರೊಂದಿಗೆ ಸೇರಿದವನೇ ಆಗಿದ್ದಾನೆ. ಏಕೆಂದರೆ **ಇನ್ನಹುಮ್ ಖೌಮುನ್ ಲಾ ಯಶ್‌ಖಾ ಜಲೀಸುಹುಮ್**. ಅವರು ಎಂತಹ ಸಮುದಾಯವೆಂದರೆ ಅವರೊಂದಿಗೆ ಕುಳಿತಿರುವವರು ದೌರ್ಭಾಗ್ಯವಂತರಾಗಲಾರರು. ಇದರಿಂದ ಸಹವಾಸ ಎಷ್ಟು ಲಾಭಕರವಾಗುತ್ತದೆ ಎಂದು ತಿಳಿಯುತ್ತದೆ. ಸಹವಾಸದಿಂದ ದೂರವಿರುವವನು ಬಹಳ ಭಾಗ್ಯಹೀನನಾಗಿದ್ದಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ಪ್ರಾರ್ಥನೆ ಮೂಲಕ ಅಲ್ಲಾಹನಿಂದ ಜ್ಞಾನವನ್ನು ಬೇಡಿಕೊಳ್ಳುವುದು ಆವಶ್ಯಕವಾಗಿದೆ. ಅದಿಲ್ಲದಿದ್ದರೆ ಪರಿಪೂರ್ಣ ದೃಢವಿಶ್ವಾಸ ಉಂಟಾಗಲಾರದು. ಅಲ್ಲಾಹನೊಂದಿಗೆ ಸಂಬಂಧ ವಿಚ್ಛೇಧಿಸುವುದು ಒಂದು ಮೃತ್ಯುವೆಂದು ತಿಳಿಯುವಾಗ ಅದು ಲಭಿಸುವುದು. ಪಾಪದಿಂದ ರಕ್ಷಣೆ ಪಡೆಯಲು ಪ್ರಾರ್ಥನೆ ಮಾಡುವ ಜೊತೆಗೆ ಸ್ವಯಂ ಪ್ರಯತ್ನ ಮಾಡುವುದನ್ನು ಬಿಟ್ಟುಬಿಡಬೇಡಿರಿ. ಪಾಪದ ಪ್ರೇರಣೆ ಉಂಟಾಗುವ ಎಲ್ಲ ಕೂಟಗಳಿಂದ ದೂರ ಸರಿಯಿರಿ. ಅದರೊಂದಿಗೆ ಪ್ರಾರ್ಥನೆ ಸಹ ಮಾಡಿರಿ. ನೀವು ಚೆನ್ನಾಗಿ ನೆನಪಿಡಿರಿ, ಅಲ್ಲಾಹನ ವಿಧಿನಿರ್ಣಯದ ಪ್ರಕಾರ ಮನುಷ್ಯನ ಕೈಯಿಂದ ಘಟಿಸುವ ವಿಪತ್ತುಗಳು ಅಲ್ಲಾಹನ ಸಹಾಯವಿಲ್ಲದಿದ್ದರೆ ಖಂಡಿತ ದೂರ ಸರಿಯಲಾರವು. ಐದು ಹೊತ್ತಿನ ನಮಾಝ್ ಸಹ ಇದನ್ನೇ ಸೂಚಿಸುತ್ತದೆ. ಶಾರೀರಿಕ ಭಾವನೆಗಳು ಮತ್ತು ಯೋಚನೆಗಳಿಂದ ಅದನ್ನು ರಕ್ಷಿಸದಿದ್ದರೆ ಅದು ಸತ್ಯವಾದ ನಮಾಝ್ ಆಗಲಾರದು. ನಮಾಝ್ ಎಂದರೆ ಅಂಗವಿನ್ಯಾಸ ಮಾಡುವುದು ಅಥವಾ ಆಚಾರ ರೂಪವಾಗಿ ಮಾಡುವುದಲ್ಲ. ನಮಾಝನ್ನು ಹೃದಯ ಸಹ ಅನುಭವಿಸಬೇಕು. ಆತ್ಮ ಕರಗಿ ಭಯಭೀತಿಯಿಂದ ಅಲ್ಲಾಹನ ಆಸ್ಥಾನದಲ್ಲಿ ಬಿದ್ದಿರಬೇಕು. ಸಾಧ್ಯವಿರುವಷ್ಟು ಮಟ್ಟಿಗೆ ದೈನ್ಯದಿಂದ ಪ್ರಾರ್ಥಿಸಿರಿ. ಅಳಲಿನೊಂದಿಗೆ ಬೇಡಿಕೊಳ್ಳಿರಿ. ಅಭಿಲಾಷೆ ಮತ್ತು ಪಾಪ ಆತ್ಮದಿಂದ ದೂರ ಸರಿಯಲಿ. ಇಂತಹ ನಮಾಝ್ ಅನುಗ್ರಹದಾಯಕವಾಗುತ್ತದೆ.

ಒಂದು ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು, ಒಬ್ಬನು ಒಂದು ಸಭೆಯಿಂದ ಎದ್ದು ಹೋಗುವಾಗ ಮೂರು ಸಾರಿ ಒಂದು ಪ್ರಾರ್ಥನೆಯ ವಚನಗಳನ್ನು ಓದಿದರೆ ಆ ವ್ಯಕ್ತಿ ಅಲ್ಲಿ ಮಾಡಿದ ತಪ್ಪುಗಳನ್ನು ಅಲ್ಲಾಹನು ಮರೆಮಾಡುವನು. ಯಾವುದಾದರೂ ಝಿಕ್ರೆ ಇಲಾಹಿಯ ಮಜ್ಲಿಸ್‌ನಲ್ಲಿ ಓದಿದರೆ ಅವನು ಅಲ್ಲಾಹನ ಕರುಣೆಗೆ ಪಾತ್ರನಾಗುವನು. ಆ ಪ್ರಾರ್ಥನೆ

ಇದಾಗಿದೆ: **ಸುಬ್‌ಹಾನಕಲ್ಲಾಹುಮ್ಮ ವಬಿಹಮ್‌ದಿಕ ಅಶ್‌ಹದು ಅಲ್ಲಾಯಿಲಾಹ ಇಲ್ಲಾ ಅಂತ ಅಸ್ತಗ್‌ಫಿರುಕ ವ ಅತೂಬು ಇಲೈಕ.** ಓ ಅಲ್ಲಾಹ್, ನೀನು ಸ್ತುತ್ಯರ್ಹನೂ ಪರಿಶುದ್ಧನೂ ಆಗಿರುವೆ. ನಿನ್ನ ಹೊರತು ಅನ್ಯ ಆರಾಧ್ಯನಿಲ್ಲ. ನಾನು ನಿನ್ನೊಂದಿಗೆ ಕ್ಷಮೆ ಯಾಚಿಸುತ್ತಾ ಪಶ್ಚಾತ್ತಾಪದಿಂದ ನಿನ್ನ ಕಡೆಗೆ ತಿರುಗುತ್ತಿದ್ದೇನೆ.

ಈ ಪ್ರಾರ್ಥನೆ ಕೆಟ್ಟ ಪ್ರಭಾವಗಳಿಂದ ತಡೆಯುತ್ತದೆ. ಮನುಷ್ಯನು ಒಳ್ಳೆಯ ಸಭೆಗಳಿಂದ ಹೆಚ್ಚು ಹೆಚ್ಚಾಗಿ ಅನುಗ್ರಹ ಗಳಿಸುವಂತೆ ಮಾಡುತ್ತದೆ.

ನಾವು ಯಾವಾಗಲೂ ಕೆಟ್ಟ ಸಭೆಗಳಿಂದ ರಕ್ಷಿಸಲ್ಪಡುವಂತೆ ಅಲ್ಲಾಹನು ನಮಗೆ ಭಾಗ್ಯ ನೀಡಲಿ. ಯಾವಾಗಲಾದರೂ ತಿಳಿಯದೆ ಕೆಟ್ಟ ಸಭೆಗಳಲ್ಲಿ ಭಾಗವಹಿಸಿದರೆ ಅವರ ಕೆಟ್ಟ ಪ್ರಭಾವಗಳಿಂದ ಅಲ್ಲಾಹನು ನಮ್ಮನ್ನು ರಕ್ಷಿಸುವವನಾಗಲಿ. ನಾವು ಪರಿಶುದ್ಧ ಸಭೆಗಳನ್ನು ಹುಡುಕುವವರೂ ಅದರಲ್ಲಿ ಕುಳಿತುಕೊಳ್ಳುವವರೂ ಆಗೋಣ. ಪರಿಶುದ್ಧ ಸಭೆಗಳ ಪರಿಶುದ್ಧತೆಯಿಂದಲೂ ಅಲ್ಲಾಹನ ಅನುಗ್ರಹದಿಂದಲೂ ಪಾಲು ಪಡೆಯುವವರಾಗೋಣ. ಅಲ್ಲಾಹನು ನಮ್ಮನ್ನು ಶೈತಾನನ ಆಕ್ರಮಣಗಳಿಂದ ರಕ್ಷಿಸಲಿ. ಅಲ್ಲಾಹನು ನಮ್ಮೊಂದಿಗೆ ಕರುಣೆಯಿಂದಲೂ ಕ್ಷಮೆಯಿಂದಲೂ ವರ್ತಿಸುವವನಾಗಲಿ. ಯಾವಾಗಲೂ ನಮ್ಮನ್ನು ಜಮಾಅತಿನೊಂದಿಗೆ ಮತ್ತು ಖಿಲಾಫತ್‌ನೊಂದಿಗೆ ಜೋಡಿಸಿಡಲಿ. ಪ್ರತಿಯೊಬ್ಬ ಪಿತೂರಿಗಾರನ ಕೆಡುಕಿನಿಂದ ರಕ್ಷಿಸಲಿ – ಆಮೀನ್.

(ಹುಝೂರ್ ಫಿಲಡೆಲ್ಫಿಯಾದ ಮುಕರ್ರಮ್ ಬಿಲಾಲ್ ಅಬ್ದುಸ್ಸಲಾಮ್ ಸಾಹೇಬರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವುದರ ಬಗ್ಗೆ ಪ್ರಕಟಿಸಿ ಅವರ ಸದ್ಗುಣಗಳನ್ನು ವಿವರಿಸಿದರು).

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 22-09-2017.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email*: *khutuba.kannada@gmail.com***



**You can find all the Sermons archived at**: www.alislam.org/friday-sermon